ವಿಷಯವನ್ನು ತಿಳಿಸಿದಾಗ, ಸಂದರ್ಶನಕ್ಕೆ ಬರಲು ಹೇಳಿಕಳಿಸಿದರು. ಕುಲಪತಿಗಳ ಜೊತೆ ಮಾತನಾಡಿ, ವಿಶೇಷ ಪ್ರಸಂಗ ಎಂದು ಪರಿಗಣಿಸಿ ನನಗೆ ಪ್ರವೇಶ ಒದಗಿಸಿಕೊಟ್ಟರು. ಮೂವತ್ತು ಜನರಲ್ಲಿ ನನ್ನದು ಕೊನೆಯ ಹೆಸರು. ಹೊರಗೆ ಬರುವಾಗ ನನ್ನ ಹೆಸರು ಮೇಲಕ್ಕೆ ಬಂದಿತ್ತು.

◆ ಬರವಣಿಗೆ ಶುರು ಮಾಡಿದ್ದು ಹೇಗೆ? ಯಾವಾಗ?

ಹೈಸ್ಕೂಲಿನಲ್ಲಿ ನರಸಿಂಹಶಾಸ್ತ್ರಿಗಳು ಅಂತ ಮೇಷ್ಟರಿದ್ದರು. ಅವರು ಕನ್ನಡ ಪಂಡಿತರು. ಅವರ ಫೋಟೊ ಈಗಲೂ ನನ್ನ ಮೇಜಿನ ಮೇಲಿದೆ. ಯಾವ ಪೀರಿಯಡ್ ಖಾಲಿ ಇದ್ದರೂ ಪಂಡಿತರು ಬರುತ್ತಿದ್ದರು. ಪಠ್ಯದಲ್ಲಿ ಇಲ್ಲದ ಕುವೆಂಪು, ಬೇಂದ್ರೆ ಪದ್ಯಗಳನ್ನು ಓದುತ್ತಿದ್ದರು. ಸಾಹಿತ್ಯದ ರುಚಿ ಹತ್ತಿದ್ದು ಹೀಗೆ. ಪಂಡಿತರು ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ ಮಾಡಿ ಬಹುಮಾನ ಕೊಡುತ್ತಿದ್ದರು. ಒಮ್ಮೆ ನನ್ನ ಪ್ರಬಂಧವೊಂದನ್ನು ಮೆಚ್ಚಿಕೊಂಡು ಶಾಲೆಯಲ್ಲಿ ಓದಿದ್ದರು. ಬರೀಬೇಕು ಎನ್ನುವ ಆಸೆ ಬಂದದ್ದು ಆಗಲೇ. ಆ ಸಮಯದಲ್ಲೇ ಪಂಜೆಯವರ 'ತೆಂಕಣಗಾಳಿಯಾಟ' ಪದ್ಯವನ್ನು ಅನುಸರಿಸಿ 'ಮುಂಗಾರುಮಳೆ' ಎನ್ನುವ ಕವಿತೆ ಬರೆದು ಮೇಷ್ಟ್ರ ಕೈಗೆ ಕೊಟ್ಟೆ. 'ರಾತ್ರಿ ಬಾ ಮಗು, ಓದಿರ್ತೇನೆ' ಎಂದರು. ಮನೆಗೆ ಹೋದಾಗ, ಚಾಪೆಯ ಮೇಲೆ ಕೂರಿಸಿಕೊಂಡು, 'ಮಗು ಬಂದಿದೆ, ಹಾಲು ಕೊಡೆ' ಎಂದು ತಮ್ಮ ಹೆಂಡತಿಗೆ ಕೂಗಿಹೇಳಿದರು. ನನ್ನ ಪಕ್ಕದಲ್ಲೇ ಕೂತ ಅವರ ಬನಿಯನ್ ತುಂಬಾ ತೂತುಗಳು. ಬಡತನದಲ್ಲಿ ಕೂಡ ಶ್ರೀಮಂತ ಮನಸ್ಸು. ಬಡತನ ಇತ್ತು, ಕಾರ್ಪಣ್ಯ ಇರಲಿಲ್ಲ. ಪದ್ಯದ ಬಗ್ಗೆ ಮಾತನಾಡಿದರು. ಅವರ ಕೈಲಿದ್ದ ಹಾಳೆಯಲ್ಲಿನ ನನ್ನ ಪದ್ಯದ ತುಂಬಾ ನಾಮ, ವಿಭೂತಿಪಟ್ಟೆಯ (ಗುರುಲಘು) ಗುರುತುಗಳು. 'ಒಂದೆರಡು ಮೂರು ಕಡೆ ತಪ್ಪಾಗಿದೆ ಅಷ್ಟೇ. ಯೋಚನೆ ಮಾಡಬೇಡ. ನೀನು ಚೆನ್ನಾಗಿ ಬರೆಯುವೆ' ಎಂದು ಬೆನ್ನುತಟ್ಟಿದರು. ಹೀಗೆ ಶುರುವಾದುದು ನನ್ನ ಕಾವ್ಯಯಾನ.

◆ ಕಾಲೇಜು ದಿನಗಳಲ್ಲಿ ಸಾಹಿತ್ಯದ ಸಖ್ಯ ಹೇಗಿತ್ತು?

ಚಿತ್ರದುರ್ಗದ ಕಾಲೇಜಿಗೆ (ಪಿಯುಸಿಗೆ) ಹೋದಾಗ ನಿಸಾರ್ ಅಹಮದ್ ಮೇಷ್ಟ್ರ ಪರಿಚಯವಾಯಿತು. ಅವರಿಗಾಗ ಇಪ್ಪತ್ತಮೂರು ವರ್ಷವಿರಬೇಕು. ಫುಲ್ ಸೂಟ್‌ನಲ್ಲಿರುತ್ತಿದ್ದರು. (ಆ ಸೂಟನ್ನು ಅವರಿನ್ನೂ ಬಿಚ್ಚಿಯೇ ಇಲ್ಲ ನೋಡಿ. ಕರ್ಣನಿಗೆ ಕವಚ ಇದ್ದಹಾಗೆ ನಿಸಾರರಿಗೆ ಸೂಟು.) 'ಯಾರೋ ಮುಸ್ಲಿಂ

ನಿಸಾರ್ ನಾನು ನೋಡಿದ ಮೊಟ್ಟ ಮೊದಲ ಜೀವಂತ ಓಡಾಡುವ ಕವಿ. ಉಳಿದವರೆಲ್ಲ ಕಾಗದದಲ್ಲಿ ಇದ್ದವರೇ.

